> ನಾನು ಯಾವತ್ತೂ ನಾಸ್ತಿಕನಲ್ಲ. ದೇವರ ಅಸ್ತಿತ್ವವನ್ನು ಯಾವತ್ತೂ ನಿರಾಕರಿಸಿಲ್ಲ. ನಾವು ಜೀವವಿಜ್ಞಾನವನ್ನು ಅರ್ಥ ಮಾಡಿಕೊಳ್ಳಬಹುದು, ಹಲವಾರು ರೋಗಗಳಿಗೆ ಕಾರಣಗಳನ್ನು ತಿಳಿದುಕೊಳ್ಳಬಹುದು, ಪರಿಹಾರವನ್ನು ಹುಡುಕಿ ಮನುಷ್ಯನ ಆಯುಸ್ಸನ್ನು ವೃದ್ಧಿಸಬಹುದು. ಆದರೆ, ಮನುಷ್ಯನ ಕ್ರೂರತನ ಮತ್ತು ಪಾತಕಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.
>
> -ಚಾರ್ಲ್ಸ್ ಡಾರ್ವಿನ್



"ದೇವರು ಅತ್ಯಂತ ಕರಕುಶಲ ಕೆಲಸಗಾರ. ಆತನೊಂದಿಗೆ ಇಲ್ಲಿ ಕೆಲಸ ಮಾಡುವುದು ಆಹ್ಲಾದವನ್ನು ನೀಡುತ್ತದೆ." – ಜಗತ್ತಿಗೆ 29 ನೊಬೆಲ್ ಪುರಸ್ಕೃತ ವಿಜ್ಞಾನಿಗಳನ್ನು ನೀಡಿದ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕ್ಯಾವೆಂಡಿಶ್ ಪ್ರಯೋಗಾಲಯದ ಪ್ರವೇಶದ್ವಾರದಲ್ಲಿ ದೇವರ ಕುರಿತು ಬರೆದಿರುವ ಪೀಠಿಕೆಯಿದು.

ಹಿಗ್ಸ್ ಬೋಸನ್ ಅಥವಾ ದೇವಕಣಗಳನ್ನು ಆವಿಷ್ಕರಿಸಲು ಮತ್ತು ಬ್ರಹ್ಮಾಂಡದ ಸೃಷ್ಟಿಗೆ ಕಾರಣಗಳನ್ನು ಹುಡುಕಲು 'ಬಯೊಟೆಕ್ ಆಕ್ಸಿಲರೇಟರ್' ಎಂಬ ವಿಶ್ವದ ಅತ್ಯಂತ ದೊಡ್ಡ ಪ್ರಯೋಗಶಾಲೆಯನ್ನು ಸ್ವಿಟ್ಜರ್ಲೆಂಡ್‌ನ ಜಿನೇವಾ ನಗರದಲ್ಲಿ ಸ್ಥಾಪಿಸಲಾಯಿತು. ಆ ಪ್ರಯೋಗಶಾಲೆಯನ್ನು ಪ್ರವೇಶಿಸಿದ ಕೂಡಲೇ ಎದುರಾಗುವ ಎರಡು ಮೀಟರ್ ಎತ್ತರದ ನಟರಾಜನ ವಿಗ್ರಹ ದೇವರ ಅಸ್ತಿತ್ವವನ್ನು ಸಾರಿ ಹೇಳುವಂತಿದೆ.

ಜೀವ, ರಾಸಾಯನಿಕ, ಭೌತವಿಜ್ಞಾನಿಗಳೂ ಸೇರಿದಂತೆ ಅನೇಕರು ಆಸ್ತಿಕರ ಪಟ್ಟಿಯಲ್ಲಿ ಗುರುತಿಸಿಕೊಳ್ಳುತ್ತಾರೆ. 'ಕೋರಾ ಸಮಿತಿ' (ಟ್ವಿಟ್ಟರ್, ಫೇಸ್‌ಬುಕ್, ಗೂಗಲ್‌ಗಳಲ್ಲಿರುವ ವಿಜ್ಞಾನಿಗಳ ಗುಂಪು. ಇಲ್ಲಿ ವಿಜ್ಞಾನ ಕುರಿತಾದ ಚರ್ಚೆ, ಪ್ರಸಾರ, ವೈಜ್ಞಾನಿಕ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.) ನಡೆಸಿದ ಸಮೀಕ್ಷೆಯ ಪ್ರಕಾರ – ಪ್ರಪಂಚದ ಶೇ. 33ರಷ್ಟು ವಿಜ್ಞಾನಿಗಳು ಆಸ್ತಿಕರಾದರೆ, ಶೇ. 18ರಷ್ಟು ಮಂದಿ ನಾಸ್ತಿಕರಾಗಿದ್ದಾರೆ. ಶೇ. 41ರಷ್ಟು ವಿಜ್ಞಾನಿಗಳು ಇನ್ನೂ ಗೊಂದಲದಲ್ಲಿದ್ದರೆ, ಶೇ. 8ರಷ್ಟು ಜನ ತಮ್ಮ ಅಭಿಮತವನ್ನು ವ್ಯಕ್ತಪಡಿಸಲು ನಿರಾಕರಿಸಿದ್ದಾರೆ.

'ವಿಕಾಸವಾದ'ವನ್ನು ಮಂಡಿಸಿದ್ದ ಜೀವವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಕಟ್ಟಾ ದೈವಭಕ್ತನಾಗಿದ್ದರು. ಕ್ಯಾಥೊಲಿಕನಾಗಿದ್ದ ಡಾರ್ವಿನ್, ಮನುಷ್ಯನ ದುಷ್ಟತನಕ್ಕೆ (problem evil) ಕಾರಣವನ್ನು ಗುರುತಿಸುವಲ್ಲಿ ವಿಫಲರಾದರು. 1879ರ ಒಂದು ಸಭೆಯಲ್ಲಿ, 'ನಾನು ಯಾವತ್ತೂ ನಾಸ್ತಿಕನಲ್ಲ. ದೇವರ ಅಸ್ತಿತ್ವವನ್ನು ಯಾವತ್ತೂ ನಿರಾಕರಿಸಿಲ್ಲ. ನಾವು ಜೀವವಿಜ್ಞಾನವನ್ನು ಅರ್ಥ ಮಾಡಿಕೊಳ್ಳಬಹುದು, ಹಲವಾರು ರೋಗಗಳಿಗೆ ಕಾರಣಗಳನ್ನು ತಿಳಿದುಕೊಳ್ಳಬಹುದು, ಪರಿಹಾರವನ್ನು ಹುಡುಕಿ ಮನುಷ್ಯನ ಆಯುಸ್ಸನ್ನು ವೃದ್ಧಿಸಬಹುದು. ಆದರೆ, ಮನುಷ್ಯನ ಕ್ರೂರತನ ಮತ್ತು ಪಾತಕಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಸರ್ ಐಸ್ಯಾಕ್ ನ್ಯೂಟನ್ ಚರ್ಚಿನ ಆಚರಣೆಗಳನ್ನು ನಂಬುತ್ತಿರಲಿಲ್ಲವಾದರೂ, ಯಾವುದೋ ಒಂದು ಶಕ್ತಿ ನಮ್ಮನ್ನು ನಿಯಂತ್ರಿಸುತ್ತಿದೆ ಎಂಬುದನ್ನು ಬಲವಾಗಿ ನಂಬಿದ್ದರು. ಯಹೂದಿಯಾಗಿದ್ದ ಆಲ್ಬರ್ಟ್ ಐನ್‌ಸ್ಟೈನ್ ಮೂರ್ತಿಪೂಜೆ, ಪುನರ್ಜನ್ಮಗಳನ್ನು ಬೆಂಬಲಿಸುತ್ತಿರಲಿಲ್ಲವಾದರೂ, ಮನುಷ್ಯನ ಪರೋಪಕಾರ ಗುಣ, ಕರುಣೆಗಳಲ್ಲಿಯೇ ದೇವರಿದ್ದಾನೆ ಎಂದು ಹೇಳುತ್ತಿದ್ದರು. ವಿಶ್ವವನ್ನು ಸಮಗ್ರವಾಗಿ ಹತೋಟಿಯಲ್ಲಿಡುವ ಒಂದು ಶಕ್ತಿ ಇದೆ ಎಂದವರು ನಂಬಿದ್ದರು. ಇನ್ನು ರಸಾಯನ ವಿಜ್ಞಾನಕ್ಕೆ ಬಂದರೆ ಮೇಡಂ ಕ್ಯೂರಿ ಯಾರಿಗೆ ಗೊತ್ತಿಲ್ಲ. ಅವರು ತಮ್ಮ ತಾಯಿಯ ಮರಣದವರೆಗೂ ದೈವಶಕ್ತಿಯ ಬಗ್ಗೆ ವಿಶೇಷ ಆಸಕ್ತಿಯನ್ನೇನೂ ಹೊಂದಿರಲಿಲ್ಲ. ನಂತರದ ದಿನಗಳಲ್ಲಿ, ದೇವರ ಇರುವಿಕೆಯನ್ನು ಒಪ್ಪಿಕೊಂಡರು.

'ನಿಸರ್ಗ ದೇವರ ಸೃಷ್ಟಿ, ಅದಕ್ಕೆ ವೈಜ್ಞಾನಿಕ ಪುರಾವೆಗಳನ್ನು ಒದಗಿಸಲು ಸಾಧ್ಯವಿಲ್ಲ. ಅದನ್ನು ಪರೀಕ್ಷಿಸುವ ಅಗತ್ಯವಿಲ್ಲ. ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಬುದ್ಧಿಶಕ್ತಿಯನ್ನು, ಇಂದ್ರಿಯಗಳನ್ನು ಕೊಟ್ಟಿದ್ದು ದೇವರೇ' ಎಂದು ಗೆಲಿಲಿಯೊ ಹೇಳುತ್ತಿದ್ದನು. ಸೌರ ಕೇಂದ್ರ ಸಿದ್ಧಾಂತವನ್ನು ದೃಢಪಡಿಸಿದ್ದರಿಂದ ಚರ್ಚಿನಿಂದ ನಿಂದನೆಗೆ ಒಳಗಾಗಿ, ಬಹಿಷ್ಕೃತಗೊಂಡು, ಅಂಧನಾಗಿ ತನ್ನ ಜೀವನದ ಕೊನೆಯ 9 ವರ್ಷಗಳನ್ನು ಗೃಹ ಬಂಧನದಲ್ಲಿ ಕಳೆದರೂ ಗೆಲಿಲಿಯೊ ದೇವರ ಅಸ್ತಿತ್ವವನ್ನು ತಳ್ಳಿಹಾಕಲಿಲ್ಲ.

ಸುಪ್ರಸಿದ್ಧ ಜೆನೆಟಿಕ್ ವಿಜ್ಞಾನಿ ಫ್ರಾನ್ಸಿಸ್ ಕೊಲಿನ್ 2009ರವರೆಗೆ 'ರಾಷ್ಟ್ರೀಯ ಆರೋಗ್ಯ ಸಂಸ್ಥೆ'ಗಳ ನಿರ್ದೇಶಕರಾಗಿದ್ದರು. ಹಲವಾರು ಆನುವಂಶಿಕ ಕಾಯಿಲೆಗಳು ಮತ್ತು ಅವುಗಳಿಗೆ ಚಿಕಿತ್ಸೆಗಳನ್ನು ಕಂಡುಹಿಡಿಯುವಲ್ಲಿ ಅವರು ಯಶಸ್ವಿಯಾಗಿದ್ದರು. 2006ರಲ್ಲಿ 'ಬೆಸ್ಟ್ ಸೆಲ್ಲರ್' ಹೆಗ್ಗಳಿಕೆಗೆ ಪಾತ್ರವಾದ 'ಲಾಂಗ್ವೇಜ್ ಆಫ್ ಗಾಡ್' ಪುಸ್ತಕವನ್ನು ಬರೆದರು. ಬೈಬಲ್‌ನಲ್ಲಿರುವ ದೇವರು ಮತ್ತು ಜೀನ್‌ನಲ್ಲಿರುವ ದೇವರು, ಇಬ್ಬರೂ ಒಂದೇ. ಅವನನ್ನು ನಾವು ಚರ್ಚಿನಲ್ಲಿ ಮತ್ತು ಪ್ರಯೋಗಾಲಯದಲ್ಲಿ ಆರಾಧಿಸಬಹುದು ಎಂದು ತಮ್ಮ ಕೃತಿಯಲ್ಲಿ ಫ್ರಾನ್ಸಿಸ್


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ. ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517